**ಪ್ರಧಾನ ನ್ಯಾಯಿಕ ದಂಡಾಧಿಕಾರಿಗಳು, ಗೋಕಾಕ ಇವರ ನ್ಯಾಯಾಲಯ ಸಾಃ ಗೋಕಾಕ**

ಸಾಕ್ಷಿಗೆ ದಿನಾಂಕಃ**07-02-2025 ರಂದು** ಪ್ರಮಾಣ ವಚನ ಬೋಧಿಸಲಾಯಿತು

PCR No.496/2024

CW.1

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

1) ನಾನು ದೂರಿನ ಜೊತೆಗೆ ಹಾಜರು ಪಡಿಸಿದ ಸಾಕ್ಷಿದಾರರ ಯಾದಿಯಲ್ಲಿ ತಿಳಿಸಿದ ಸಾಕ್ಷಿದಾರರಿಗೆ ಈ ಪ್ರಕರಣದ ಕುರಿತು ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

2) ಸಿಸಿ ನಂಬರ 3573/2017 ರ ಪ್ರಕರಣದ ಕುರಿತು ನನಗೆ ಮಾಹಿತಿ ಇರುತ್ತದೆ. ಸಾಕ್ಷಿಯು ಸ್ವತಃ ಮುಂದುವರೆದು ಸದರಿ ಪ್ರಕರಣದ ಪಿರ್ಯಾದುದಾರರ ಕಡೆಯಿಂದ ನಾನು ಆರೋಪಿಗೆ ಹಣ ಕೊಡಿಸಿಕೊಟ್ಟಿದ್ದು ಆ ಕಾರಣ ನನಗೆ ಸಾಕ್ಷಿದಾರರು ಎಂದು ಹಾಕಿರುವುದು ಗೊತ್ತಿರುತ್ತದೆ. ದಿಃ 08-03-2024 ರಂದು ಆರೋಪಿ ನನ್ನ ಮನಗೆ ಬಂದು ಹಣ ಪಡೆದುಕೊಂಡಿರುತ್ತಾನೆ. ಎಷ್ಟು ಗಂಟೆಗೆ ಆರೋಪಿ ನನ್ನ ಮನೆಗೆ ಬಂದಿದ್ದಾ ಎಂಬುವುದು ನನಗೆ ನೆನಪಿಲ್ಲ. ಸದರಿ ದಿನ ಯಾವ ದಿನವಾಗಿತ್ತು ಎಂಬುವುದು ನನಗೆ ಈಗ ನೆನಪಿಲ್ಲ. ನಿಸಿ-1 ರ ಚೆಕ್ಕಿನ ಮೇಲೆ ಬರೆದ ಬರವಣಿಗೆ ಆರೋಪಿಯದ್ದಾಗಿರುವುದಿಲ್ಲ ಎಂದರೆ ಸಾಕ್ಷಿಯು ಆರೋಪಿಯೇ ಬರೆದುಕೊಂಡು ಬಂದ ಚೆಕ್ಕನ್ನು ನನಗೆ ನೀಡಿರುತ್ತಾನೆ. ಅದರ ಮೇಲಿನ ಬರವಣಿಗೆ ಯಾರದ್ದಾಗಿರುತ್ತದೆ ಎಂಬುವುದು ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಸಿ-1 ರ ಚೆಕ್ಕನ್ನು

ನಾನೇ ಬರೆದು ಕೊಂಡಿರುತ್ತೇನೆ ಎಂದರೆ ಸರಿಯಲ್ಲ. 2017 ನೇ ಸಾಲಿನಲ್ಲಿ ನಿಸಿ–1 ರ ಚೆಕ್ಕು ನನ್ನ ಬಳಿ ಇತ್ತು ಎಂದರೆ ಸರಿಯಲ್ಲ. ಸಿಸಿ ನಂಬರ 3573/2017 ರಲ್ಲಿನ ಚೆಕ್ ನಂಬರ 478839 ರಲ್ಲಿ ಬರೆದ ಬರವಣಿಗೆ ಮತ್ತು ಈ ಪ್ರಕರಣದ ನಿಸಿ –1 ರ ಚೆಕ್ಕಿನ ಮೇಲೆ ಬರೆದ ಬರವಣಿಗೆ ಒಬ್ಬನೇ ವ್ಯಕ್ತಿ ಬರೆದಂತಹ ಬರವಣಿಗೆಯಾಗಿರುತ್ತದೆ ಎಂದರೆ ಸರಿಯಲ್ಲ.

3) ನಾನು ಮತ್ತು ಸಾಕ್ಷಿದಾರರು ಮಿಲಾಪೆಯಾಗಿ ಆರೋಪಿಯ ಚೆಕ್ಕನ್ನು ದುರುಪಯೋಗಪಡಿಸಿಕೊಂಡು ಇದೊಂದು ಸುಳ್ಳು ಕೇಸು ಹಾಕಿರುತ್ತೇವೆ ಎಂದರೆ ಸರಿಯಲ್ಲ. ದಿಃ 08–03–2024 ರಂದು ಸಾಕ್ಷಿದಾರರಾದ ಎಮ್ ವಾಯ ಪೂಜಾರಿರವರು ನನ್ನ ಮನೆಗೆ ಎಷ್ಟು ಗಂಟೆಗೆ ಬಂದಿದ್ದರು ಎಂಬುವುದು ನನಗೀಗ ನೆನಪಿಲ್ಲ.

4) ನಾನು ಅನಧೀಕೃತವಾಗಿ ಲೇವಾದೇವಿ ವ್ಯವಹಾರ ಮಾಡುತ್ತೇನೆ ಎಂದರೆ ಸರಿಯಲ್ಲ. ದಿಃ 06–03–2024 ರಂದು ಆರೋಪಿಯ ಖಾತೆಗೆ ರೂ. 3,00,000/– ಹಣ ಜಮೆ ಆಗಿದ್ದವು ಎಂದರೆ ನನಗೆ ಗೊತ್ತಿಲ್ಲ. ದಿಃ 08–03–2024 ರಂದು ಆರೋಪಿಗೆ ನಾನು ರೂ. 500/– ಮುಖಬೆಲೆಯ ಒಟ್ಟು ರೂ. 2,50,000/– ಹಣ ನೀಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗಾಗಿ ನ್ಯಾಯಾಲಯದ ಸಮಯ ಮುಕ್ತಾಯವಾಗಿರುವುದರಿಂದ ಮುಂದೂಡಲಾಯಿತು.**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

(ರಾಜೀವ ಗೋಳಸಾರ)
ಪ್ರ.ದಿ.&ನ್ಯಾದಂ., ಗೋಕಾಕ.